(ಕಂದಾಯ ಇಲಾಖೆ)

**ತಹಶೀಲ್ದಾರ್‌ರವರ ಕಾರ್ಯಾಲಯ, ಹೆಗ್ಗಡದೇವನಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.**

ನಂ.ಎಲ್.ಎನ್.ಡಿ(2)ಇತರೆ.148/09-10

ದಿನಾಂಕ 2-7-2010

## ಅಧಿಕೃತ ಜ್ಞಾಪನ

ವಿಷಯ:- ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ರಚಿಸುವ ಬಗ್ಗೆ.

ಉಲ್ಲೇಖ:- 1) ಸರ್ಕಾರದ ಆದೇಶ ಸಂ.ಕಂಇ.82 ಎಲ್.ಜಿ.ಕ್ಯೂ.99 (ಪಿ1) ಬೆಂಗಳೂರು ದಿನಾಂಕ 13-11-2008 ಮತ್ತು ಆರ್.ಡಿ.556 ಎಲ್.ಜಿಬಿ.2009, ಬೆಂಗಳೂರು ದಿನಾಂಕ 19-9-2009.

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಸರ್ಕಾರಿ ಆದೇಶದಲ್ಲಿ ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ರಚಿಸಲು ಸೂಚಿಸಿದ್ದು, ಈ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪ್ರಾಧಿಕಾರಿಗಳು ನಿಯತಕಾಲಿಕವಾಗಿ ಸಭೆ ಸೇರಿ ಆಗಿರುವ ಪ್ರಗತಿ ಬಗ್ಗೆ ಚರ್ಚಿಸಿ ಜಿಲ್ಲಾಧಿಕಾರಿಗಳ ಮೂಲಕ ಅಧ್ಯಕ್ಷರು, ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ, ಬೆಂಗಳೂರುರವರಿಗೆ ಸಭೆ ನಡವಳಿ ಹಾಗೂ ಪ್ರಗತಿ ವರದಿಯನ್ನು ಸಲ್ಲಿಸಬೇಕಾಗಿದೆ ಹಾಗೂ ತಹಶೀಲ್ದಾರರು ತಾಲ್ಲೂಕು ಮಟ್ಟದ ಪ್ರಾಧಿಕಾರದ ಸಭೆಯನ್ನು ಇನ್ನು ಮುಂದೆ ನಿಯತಕಾಲಿಕವಾಗಿ ಸಭೆ ಕರೆದು ಸಭೆ ನಡೆಸಿ ನಿರ್ಣಯ ಹಾಗೂ ಪ್ರಗತಿ ವರದಿಯನ್ನು ನಿಯತಕಾಲಿಕವಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕಾಗಿದೆ.

ಆದುದರಿಂದ ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಸರ್ಕಾರಿ ಜಮೀನು ಸಂರಕ್ಷಣಾ ಪ್ರಾಧಿಕಾರವನ್ನು ಕೆಳಕಂಡಂತೆ ರಚಿಸಿ ಆದೇಶಿಸಿದೆ.

| | | |
|---|---|---|
| 1. | ತಹಶೀಲ್ದಾರರು | ಅಧ್ಯಕ್ಷರು |
| 2. | ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹೆಚ್.ಡಿ.ಕೋಟೆ | ಸದಸ್ಯರು |
| 3. | ವೃತ್ತ ಆರಕ್ಷಕ ನಿರೀಕ್ಷಕರು, ಹೆಚ್.ಡಿ.ಕೋಟೆ | ಸದಸ್ಯರು |
| 4. | ವಲಯ ಅರಣ್ಯಾಧಿಕಾರಿಗಳು, ಸರಗೂರು/ಹೆಗ್ಗಡದೇವನಕೋಟೆ ವಲಯ | ಸದಸ್ಯರು |
| 5. | ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿಲ್ಲಾ ಪಂಚಾಯತ್ ತಾಂತ್ರಿಕ ಉಪವಿಭಾಗ, ಹೆಗ್ಗಡದೇವನಕೋಟೆ | ಸದಸ್ಯರು |
| 6. | ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹೆಗ್ಗಡದೇವನಕೋಟೆ | ಸದಸ್ಯರು |
| 7. | ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನೀರಾವರಿ ಇಲಾಖೆ, ತಾರಕ/ಕಬಿನಿ | ಸದಸ್ಯರು |
| 8. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ, ಮೈಸೂರು | ಸದಸ್ಯರು |
| 9. | ತಾಲ್ಲೂಕು ಆರೋಗ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಹೆಚ್.ಡಿ.ಕೋಟೆ | ಸದಸ್ಯರು |
| 10. | ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಹೆಚ್.ಡಿ.ಕೋಟೆ | ಸದಸ್ಯರು |
| 11. | ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಹೆಚ್.ಡಿ.ಕೋಟೆ | ಸದಸ್ಯರು |
| 12. | ಶಿಶು ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಹೆಚ್.ಡಿ.ಕೋಟೆ | ಸದಸ್ಯರು |

(ಪು.ತಿ.ನೋ)

| | | |
|---|---|---|
| 13. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಹೆಚ್.ಡಿ.ಕೋಟೆ | ಸದಸ್ಯರು |
| 14. | ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ, ಹೆಚ್.ಡಿ.ಕೋಟೆ | ಸದಸ್ಯರು |
| 15. | ಸಹಾಯಕ ಕಾರ್ಯಪಾಲಕ ಇಂಜನಿಯರ್, ಚೆಸ್ಕಾಂ, ಹೆಗ್ಗಡದೇವನಕೋಟೆ | ಸದಸ್ಯರು |
| 16. | ಸಹಾಯಕ ನಿರ್ದೇಶಕರು, ಪಶುಪಾಲನಾ ಇಲಾಖೆ, ಹೆಚ್.ಡಿ.ಕೋಟೆ | ಸದಸ್ಯರು |

ಪ್ರಾಧಿಕಾರ ಈ ಕೆಳಕಂಡ ಅಂಶಗಳ ಕುರಿತು ಕಾರ್ಯನಿರ್ವಹಿಸತಕ್ಕದ್ದು.

1. ಸರ್ಕಾರಿ ಭೂಮಿಯ ಒತ್ತುವರಿಯನ್ನು ಪತ್ತೆ ಹಚ್ಚುವುದು
2. ಸರ್ಕಾರಿ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸಿ ತ್ರೈಮಾಸಿಕ ವರದಿಯನ್ನು ಸಲ್ಲಿಸುವುದು
3. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 192(ಎ)ರ ಅಡಿಯಲ್ಲಿ ಅಪರಾಧ ಪ್ರಕರಣಗಳನ್ನು ದಾಖಲು ಮಾಡುವುದು.

(ಸಹಿ)
ತಹಶೀಲ್ದಾರ್,
ಹೆಗ್ಗಡದೇವನಕೋಟೆ

ಪ್ರತಿಯನ್ನು:-

1. ಮಾನ್ಯ ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರುರವರ ಅವಗಾಹನೆಗೆ ಸಲ್ಲಿಸಿದೆ;
2. ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರ ಅವಗಾಹನೆಗೆ ಸಲ್ಲಿಸಿದೆ;
3. ಮಾನ್ಯ ಉಪವಿಭಾಗಾಧಿಕಾರಿಗಳು, ಹುಣಸೂರು ಉಪವಿಭಾಗ ಇವರ ಅವಗಾಹನೆಗೆ ಸಲ್ಲಿಸಿದೆ;
4. ಸಂಬಂಧಪಟ್ಟ ಪ್ರಾಧಿಕಾರದ ಎಲ್ಲಾ ಸದಸ್ಯರುಗಳ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

N. C. [illegible]
ತಹಶೀಲ್ದಾರ್,
ಹೆಗ್ಗಡದೇವನಕೋಟೆ